**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.9324/2023**

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಅಶೋಕನಗರ ಆರಕ್ಷಕ ಠಾಣೆ, ಬೆಂಗಳೂರು.

ವಿರುದ್ಧ

ಆರೋಪಿತರ ಹೆಸರುಃ 2. ರಮೇಶ್ ಬಾಬು

4. ಭರತ್ ವಿ.ಸಿ

**ದೋಷಾರೋಪಣೆ**

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಶ್ರೇಯಾಂಶ ದೊಡ್ಡಮನಿ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣ ಪಟ್ಟಿಯ 2 ಮತ್ತು 4 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಸೇರಿದ ಪೊಪರ್ಬನ್ ಅಡ್ವೈಸರಿ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 2 ನೇ ಆರೋಪಿಯಾದ ನೀವು ಸದರಿ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಕಂಪನಿಯ ಅಧೀನದಲ್ಲಿರುವ ಬಿಲ್ಡಿಂಗ್ ಗಳ ಬಾಡಿಗೆದಾರರಿಗೆ ತಪ್ಪು ಮಾಹಿತಿ ನೀಡಿ ಬಾಡಿಗೆದಾರರಾದ ಚಾಸಾ-5 ರವರಿಂದ ದಿನಾಂಕ 08.04.2021 ರಂದು ರೂ.17,483/- ಗಳನ್ನು ನಿಮ್ಮ ವೈಯಕ್ತಿಕ ಖಾತೆಗೆ ಆನ್ ಲೈನ್ ವರ್ಗಾವಣೆ ಮಾಡಿಕೊಂಡಿದ್ದು , ಚಾಸಾ-6 ರವರಿಂದ ದಿನಾಂಕ 2021 ರ ಏಪ್ರಿಲ್ ತಿಂಗಳಲ್ಲಿ ರೂ.6,000/- ಗಳ ಬಾಡಿಗೆ ಹಣವನ್ನು ನಗದುರೂಪದಲ್ಲಿ ಪಡೆದಿದ್ದು, ಚಾಸಾ-12 ರವರಿಂದ ರೂ.5,000/- ಹಣವನ್ನು ಮುಂಗಡವಾಗಿ ನಗದುರೂಪದಲ್ಲಿ ಪಡೆದಿದ್ದು, 4 ನೇ ಆರೋಪಿಯಾದ ನೀವು ಕೂಡ ಇದೇ ರೀತಿ ಚಾಸಾ-7 ರವರಿಂದ ದಿನಾಂಕ 03.04.2021 ರಂದು ರೂ.20,000/- ಗಳನ್ನು ಆನ್ ಲೈನ್ ಮೂಲಕ, ರೂ.10,000/- ಗಳನ್ನು ನಗದು ರೂಪದಲ್ಲಿ ಪಡೆದಿದ್ದು , ಚಾಸಾ-8 ರವರಿಂದ ಏಪ್ರಿಲ್ ತಿಂಗಳಿನಲ್ಲಿ ರೂ.22,450/- ಗಳನ್ನು ನಗದುರೂಪದಲ್ಲಿ ಪಡೆದಿದ್ದು, ಚಾಸಾ-9 ರವರಿಂದ 2021 ರ ಏಪ್ರಿಲ್ ತಿಂಗಳಲ್ಲಿ ಪೈಂಟಿಂಗ್ ಖರ್ಚು ಮತ್ತು ಮುಂಗಡವೆಂದು ರೂ.20,000/- ಗಳನ್ನು ನಗದುರೂಪದಲ್ಲಿಯೂ, ರೂ.5,000/- ಗಳನ್ನು ಆನ್ ಲೈನ್ ವರ್ಗಾವಣೆಯ ಮೂಲಕ ಪಡೆದಿದ್ದು, ಚಾಸಾ-10 ರವರಿಂದ 2021 ರ ಏಪ್ರಿಲ್ ತಿಂಗಳಿನಲ್ಲಿ ಮನೆ ಬಾಡಿಗೆ ಹಣವಾಗಿ ರೂ.10,500/- ಗಳನ್ನು ನಗದುರೂಪದಲ್ಲಿ ಪಡೆದಿದ್ದು , ಚಾಸಾ-11 ರವರಿಂದ 2021 ರ ಏಪ್ರಿಲ್ ತಿಂಗಳಿನಲ್ಲಿ ಮನೆ ಬಾಡಿಗೆ ಹಣವಾಗಿ ರೂ.6,000/- ಗಳನ್ನು ಫೋನ್ ಪೇ ಮೂಲಕ ಪಡೆದಿದ್ದು, ಚಾಸಾ-13 ಮತ್ತು ಚಾಸಾ-14 ರವರಿಂದ ಏಪ್ರಿಲ್ 2021 ರಲ್ಲಿ ಕ್ರಮವಾಗಿ ರೂ.10,000/- ಮತ್ತು ರೂ.14,500/- ಗಳನ್ನು ಬಾಡಿಗೆ ಹಣವಾಗಿ ಪಡೆದಿದ್ದು, 2 ನೇ ಆರೋಪಿಯಾದ ನೀವು ಬಾಡಿಗೆದಾರರಿಂದ ಒಟ್ಟು ರೂ.28,483/- ಗಳನ್ನು, 4 ನೇ ಆರೋಪಿಯಾದ ನೀವು ಬಾಡಿಗೆದಾರರಿಂದ ಒಟ್ಟು ರೂ.1,18,450/- ಗಳನ್ನು ಪಡೆದುಕೊಂಡು ಸಮಾನ ಉದ್ದೇಶದಿಂದ ನೀವು ಸದರಿ

ಕಂಪನಿಗೆ ಪಾವತಿ ಮಾಡದೆ ನಿಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.408 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ಮತ್ತು 4 ನೇ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶವನ್ನಿಡೇರಿಕೊಳ್ಳಲು, ಮೇಲೆ ಹೇಳಿದಂತೆ 2 ನೇ ಆರೋಪಿಯಾದ ನೀವು ಬಾಡಿಗೆದಾರರಿಂದ ಒಟ್ಟು ರೂ.28,483/- ಗಳನ್ನು, 4 ನೇ ಆರೋಪಿಯಾದ ನೀವು ಬಾಡಿಗೆದಾರರಿಂದ ಒಟ್ಟು ರೂ.1,18,450/- ಗಳನ್ನು ಪಡೆದುಕೊಂಡು ಸಮಾನ ಉದ್ದೇಶದಿಂದ ನೀವು ಸದರಿ ಪೊಪರ್ಬನ್ ಅಡ್ವೈಸರಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಪಾವತಿ ಮಾಡದೆ ನಿಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಮೋಸ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರ:1 ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

ಉ: 2 ನೇ ಆರೋಪಿ:

4 ನೇ ಆರೋಪಿ:

ಪ್ರ:2 ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉ: 2 ನೇ ಆರೋಪಿ:

4 ನೇ ಆರೋಪಿ:

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕ:02.11.2023. 3 ನೇ ಎ.ಸಿ.ಎಂ.ಎಂ., ನ್ಯಾಯಾಲಯ,

ಬೆಂಗಳೂರು.